ಇ) ರಾಜ್ಯದ ರೈತರಿಗೆ ಬೇಕಾದ ವಿವಿಧ ಬೆಳೆಗಳ ಬೀಜಗಳು ಭತ್ತ, ರಾಗಿ, ಬೇಳೆಕಾಳು, ನೆಲಗಡಲೆ, ಸೂರ್ಯಕಾಂತಿ ಸೋಯ ಅವರೆ, ಹತ್ತಿ, ಕಬ್ಬು, ಗೋಧಿ, ಜೋಳ ಹಾಗೂ ತೋಟಗಾರಿಕೆ ಬೆಳೆಗಳು. ಈ ತಳಿವರ್ಧಕ ಬೀಜಗಳನ್ನು ಬೆಳೆದು ವಿವಿಧ ಸರ್ಕಾರ ಸಂಸ್ಥೆಗಳಾದ ಕೃಷಿ ಇಲಾಖೆ, ಕರ್ನಾಟಕ ರಾಜ್ಯ ಬೀಜ ನಿಗಮ ರಾಷ್ಟ್ರೀಯ ಬೀಜ ನಿಗಮ ಮತ್ತು ಕೆಲವು ಖಾಸಗಿ ಸಂಸ್ಥೆಗಳ ಮೂಲಕ ರೈತರಿಗೆ ಒದಗಿಸಲಾಗುತ್ತಿದೆ.

ಬೆಳಗಾವಿ ಜಿಲ್ಲೆಯಲ್ಲಿರುವ ಸಹಕಾರಿ ಬ್ಯಾಂಕು ಕುರಿತು.

128(434) ಶ್ರೀ ನಾಯಕ್ ಚಂದ್ರಶೇಖರ್ ಸದಾಶಿವ (ಗೋಕಾಕ್) :— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾವಿ ಜಿಲ್ಲೆಯಲ್ಲಿರುವ ಸಹಕಾರಿ ಬ್ಯಾಂಕು ಪಿಕಾರ್ಡ್ ಬ್ಯಾಂಕುಗಳಿಂದ ಕಳೆದ 3 ವರ್ಷಗಳಲ್ಲಿ ಸಾಲ ಪಡೆದ ರೈತರ ಸಂಖ್ಯೆ ಎಷ್ಟು? ಆ ಪೈಕಿ ಕಬ್ಬು ಬೆಳೆಗಾಗಿ ಸಾಲ ಪಡೆದ ರೈತರ ಸಂಖ್ಯೆ ಎಷ್ಟು?

ಆ) ಸಾಲ ಮರುಪಾವತಿ ಮಾಡಿದ ರೈತರ ಸಂಖ್ಯೆ ಎಷ್ಟು?

ಇ) ಸಾಲ ಮರುಪಾವತಿಯಲ್ಲಿನ ವಿಳಂಬ ತಪ್ಪಿಸಲು ಸಾಲ ಪಡೆದ ರೈತರ ಕಬ್ಬನ್ನು ಸಂಬಂಧಪಟ್ಟ ಕಾರ್ಖಾನೆಗಳಿಗೆ ಸಾಗಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಈ) ನಿಗದಿತ ವೇಳೆಯಲ್ಲಿ ಕಬ್ಬನ್ನು ಸಾಗಿಸಲು ಸಾಧ್ಯವಾಗದಿದ್ದಲ್ಲಿ ಅಂತಹ ರೈತರ ಸಾಲವನ್ನು ಬಡ್ಡಿರಹಿತ ಸಾಲವೆಂದು ಸರ್ಕಾರ ಪರಿಗಣಿಸುವುದೇ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :—

ಅ) ಬೆಳಗಾವಿ ಜಿಲ್ಲೆಯಲ್ಲಿ ಸಹಕಾರ ಬ್ಯಾಂಕ್, ಪಿಕಾರ್ಡ್ ಬ್ಯಾಂಕುಗಳಿಂದ ಸಾಲ ಪಡೆದ ರೈತರ ವಿವರ ಈ ಕೆಳಕಂಡಂತಿದೆ

ವರ್ಷ	ರೈತರ ಸಂಖ್ಯೆ	ಈ ಪೈಕಿ ಕಬ್ಬು ಬೆಳೆಗಾಗಿ ಸಾಲ ಪಡೆದ ರೈತರ ಸಂ.
1995-96	90,412	54,569
1996-97	1,02,618	67,598
1997-98	1,27,539	77, 527
ಜನವರಿ -99ರ ವರೆಗೆ	86,894	53,006

ಅ) ವರ್ಷ	ಸಾಲ ಮರುಪಾವತಿ ಮಾಡಿದ ರೈತರ ಸಂಖ್ಯೆ
1995-96	43,354
1996-97	57,990
1997-98	64,242
1998-99 ಜನವರಿ-99ರ ವರೆಗೆ	8,961

ಇ) ಜಿಲ್ಲೆಯಲ್ಲಿ ಪ್ರಸ್ತುತ ಸಹಕಾರಿ ವಲಯದಲ್ಲಿ 7 ಮತ್ತು 2 ಖಾಸಗಿ ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಕಾರ್ಖಾನೆಗಳು ತಮ್ಮ ಕಾರ್ಯ ಕ್ಷೇತ್ರದಲ್ಲಿಯ ರೈತರ ಕಬ್ಬುಗಳನ್ನು ನುರಿಯುತ್ತಿವೆ. ಆದಾಗ್ಯೂ ಹೆಚ್ಚಾಗಿ ಬೆಳೆದಿರುವ ಕಬ್ಬನ್ನು ನೆರೆಯ ರಾಜ್ಯಕ್ಕೆ ಸಾಗಿಸುವ ಪ್ರಯತ್ನ ನಡೆದಿದೆ.

ಈ) ಪ್ರಸ್ತಾವೆ ಸರ್ಕಾರದ ಮುಂದಿರುವುದಿಲ್ಲ.

ಗೋಕಾಕ್ ನಗರದಲ್ಲಿರುವ ಸರಕಾರಿ ಬಸ್ ನಿಲ್ದಾಣ.

129(512) ಶ್ರೀ ನಾಯಕ್ ಚಂದ್ರಶೇಖರ ಸದಾಶಿವ (ಗೋಕಾಕ್) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗೋಕಾಕ್ ನಗರದಲ್ಲಿರುವ ಸರಕಾರಿ ಬಸ್ ನಿಲ್ದಾಣ ತುಂಬಾ ಚಿಕ್ಕದಾಗಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ವಿಷಯ ಸರಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸದರಿ ಬಸ್ ನಿಲ್ದಾಣವನ್ನು ವಿಸ್ತರಿಸಲು ಸರಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಎಸ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಹೌದು

ಆ) ಗೋಕಾಕ್ ಪಟ್ಟಣದಲ್ಲಿ ಹೊಸ ಬಸ್ ನಿಲ್ದಾಣವನ್ನು ನಿರ್ಮಿಸಲು ಸೂಕ್ತ ನಿವೇಶನವನ್ನು ಗುರುತಿಸಲಾಗುತ್ತಿದ್ದು, ನಿವೇಶನ ದೊರೆತ ನಂತರ ಬಸ್ ನಿಲ್ದಾಣವನ್ನು ಕಟ್ಟಿಸಲು ಕ್ರಮ ತೆಗೆದುಕೊಳ್ಳಲಾಗುವುದು.